**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 67/2024**

ಸಿ ಡಬ್ಲ್ಯೂ -3

ಪಿ ಡಬ್ಲ್ಯೂ-4

| | | |
|---|---|---|
| **ಸಾಕ್ಷಿದಾರರ ಹೆಸರು** | : | ಶಿವಯೋಗಿ |
| **ತಂದೆ/ಗಂಡನ ಹೆಸರು** | : | ಮೃತ್ಯುಂಜಯ |
| **ವಯಸ್ಸು** | : | 36 ವರ್ಷ |
| **ಉದ್ಯೋಗ** | : | ಕಂಪ್ಯೂಟರ್ ಆಪರೇಟರ್ |
| **ವಾಸ** | : | ರಾಣೇಬೆನ್ನೂರು |

**ದಿನಾಂಕಃ 05-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಸಾಕ್ಷಿಗೆ ನಿ ಪಿ -2 ಮಹಜರ್ ನ್ನು ತೋರಿಸಲಾಯಿತು. ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯ ಸಹಿಯನ್ನು ನಿ ಪಿ -2 ಡಿ ಎಂದು ಗುರುತಿಸಲಾಯಿತು. ನಿ ಪಿ -2 ಮಹಜರ್ ಗೆ ಕೊಟ್ರೇಶ್ವರ ಮಠದ ಹತ್ತಿರ ಆಹಾರ ನಿರೀಕ್ಷಕರಾದ ಚಾಸಾ-1 ರವರು ಕ್ಯಾಂಟರ್ ಗಾಡಿಯಲ್ಲಿದ್ದ ಅಕ್ಕಿಯ ಚೀಲಗಳನ್ನು ಅಮಾನತುಪಡಿಸಿಕೊಂಡ ಕಾಲಕ್ಕೆ ಹಾಜರಿದ್ದು ಸಹಿ ಮಾಡಿರುತ್ತೇನೆ. ಕ್ಯಾಂಟರ್ ಲಾರಿಯಲ್ಲಿ ಸುಮಾರು 300-350 ಅಕ್ಕಿಯ ಚೀಲಗಳು ಇತ್ತು. ನಂತರ ಅಕ್ಕಿ ಚೀಲಗಳನ್ನು ತುಂಬಿದ್ದ ಲಾರಿಯನ್ನು ಗೋಡಾನ್ ಗೆ ಕಳುಹಿಸಿಕೊಟ್ಟಿರುತ್ತಾರೆ. ಆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತ ಲಾರಿಯ ಚಾಲಕನಾಗಿದ್ದನು. ಅಮಾನತುಪಡಿಸಿಕೊಂಡ ಕಾಲಕ್ಕೆ ಚಾಸಾ-1 ರವರು ಸಂಗ್ರಹಿಸಿರುವ ಮಾದರಿ ಅಕ್ಕಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಪ್ಲಾಸ್ಟಿಕ್ ಕವರ್ ನಲ್ಲಿರುವ ಅಕ್ಕಿಯನ್ನು ಸಾಕ್ಷಿಗೆ ತೋರಿಸಲಾಯಿತು. ಅದನ್ನು ಗುರುತಿಸಿದ್ದಾರೆ. ಅದನ್ನು ಈಗಾಗಲೇ ಎಮ್ ಒ -1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು : ಆರೋಪಿತನ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ನಾನು ಆಹಾರ ನಿರೀಕ್ಷಕರ ಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಸುಮಾರು 12 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಚಾಸಾ-1 ರವರು ನನ್ನ ಮೇಲಾಧಿಕಾರಿಗೆ ಎಂದರೆ ನಿಜ. ನಿ ಪಿ -2 ಮಹಜರ್ ಗೆ ಚಾಸಾ-1 ರವರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ

ಸಿ ಡಬ್ಲ್ಯೂ -3

ಪಿ ಡಬ್ಲ್ಯೂ-4

ನಿಜ. ನಿ ಪಿ -2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ನಿಜ. ನನ್ನ ಸಮಕ್ಷಮ ಯಾವುದೇ ಕ್ಯಾಂಟರ್ ಲಾರಿ ಮತ್ತು ಅಕ್ಕಿ ಚೀಲಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ನಿಜ. ನಾನು ಆರೋಪಿತನನ್ನು ನಮ್ಮ ಕಚೇರಿಯಲ್ಲಿ ನೋಡಿರುತ್ತೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.